# ವಿದ್ವತ್ತು, ವಾಗ್ವಾದಗಳ ಕವಿ

## ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ

**ಕನ್ನಡ ಸಾಹಿತ್ಯವನ್ನು ತಮ್ಮ ಬರಹಗಳಿಂದ ಶ್ರೀಮಂತಗೊಳಿಸಿದ ಕವಿ ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟರು (29 ಅಕ್ಟೋಬರ್ 1936 – 06 ಮಾರ್ಚ್ 2021) ಇತ್ತೀಚೆಗೆ ನಿಧನರಾದರು. ಅವರ ವ್ಯಕ್ತಿತ್ವ ಮತ್ತು ಕನ್ನಡ ಸಾಹಿತ್ಯಕ್ಕೆ ಅವರು ಕೊಟ್ಟ ಕೊಡುಗೆಯ ಅವಲೋಕನ ಇಲ್ಲಿದೆ.**

ಇತ್ತೀಚೆಗೆ ನಮ್ಮನ್ನಗಲಿದ ಕವಿ ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟರು ಸುಮಾರು ಸುಮಾರು ಆರು ದಶಕಗಳಿಗಿಂತಲೂ ಹೆಚ್ಚು ಕಾಲ ಕನ್ನಡ ಸಾಹಿತ್ಯಲೋಕದಲ್ಲಿ ಕ್ರಿಯಾಶೀಲರಾಗಿದ್ದವರು. ಅವರ 'ಭಾರತೀಯ ಗ್ರಂಥಸಂಪಾದನ ಪರಿಚಯ' ಎಂಬ ಅನುವಾದಿತ ಶಾಸ್ತ್ರ ಗ್ರಂಥವೂ, ಮೊದಲ ಕವನ ಸಂಕಲನ 'ವೃತ್ತ'ವೂ ಒಂದೇ ವರ್ಷ (1968) ಪ್ರಕಟವಾದವು. ಪ್ರಾಯಶಃ ಭಟ್ಟರ ಆಸಕ್ತಿಯ ಎರಡು ಮುಖ್ಯ ಧಾರೆಗಳು ಇಲ್ಲಿಂದಲೇ ಕಾಣಿಸಿಕೊಳ್ಳುತ್ತವೆ ಎಂದು ತೋರುತ್ತದೆ. ಕಾವ್ಯದಷ್ಟೇ ಅವರಿಗೆ ಕಾವ್ಯಮೀಮಾಂಸೆ, ಶಾಸ್ತ್ರಾಧ್ಯಯನಗಳೂ ಪ್ರಿಯವಾದವು. ವೃತ್ತಿಯಿಂದ ಅವರು ಅಧ್ಯಾಪಕರು. ವಿದ್ಯಾರ್ಥಿವೃಂದದ ಅಚ್ಚುಮೆಚ್ಚಿನ ಅಧ್ಯಾಪಕರಾಗಿದ್ದವರು. ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ಸುವರ್ಣ ದಿನಗಳ ಕಾಂತಿಯಲ್ಲಿ ಈ ಪ್ರತಿಭಾವಂತರ ಪಾಠಗಳ ಪಾಲೂ ದೊಡ್ಡದಿದೆ. ಅವರ ವಿದ್ಯಾರ್ಥಿಗಳಾಗಿದ್ದ ನನ್ನ ಕೆಲವು ಕವಿಮಿತ್ರರು ಭಟ್ಟರೊಡನೆ ತಮಗಿರುವ ಮತಭೇದಗಳ ಕುರಿತು